# ಎನ್ಐಟಿಕೆ ಸಂಸ್ಥಾಪಕ ಶ್ರೀನಿವಾಸ ಮಲ್ಯ ಜನ್ಮದಿನ

**ಸುರತ್ಕಲ್:** ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕ (ಎನ್ಐಟಿಕೆ) ಸಂಸ್ಥಾಪಕ, ಮಾಜಿ ಸಂಸದ ದಿವಂಗತ ಯು. ಶ್ರೀನಿವಾಸ ಮಲ್ಯ ಅವರ 121ನೇ ಜನ್ಮ ದಿನಾಚರಣೆಯು ಎನ್ಐಟಿಕೆಯಲ್ಲಿ ಮಂಗಳವಾರ ನಡೆಯಿತು.

ಎನ್ಐಟಿಕೆ ಉಸ್ತುವಾರಿ ನಿರ್ದೇಶಕ ಮತ್ತು ಡೀನ್ ರಿಸರ್ಚ್ ಆ್ಯಂಡ್ ಕನ್ಸಲ್ಟೆನ್ಸಿ ಪ್ರೊ.ಎಸ್.ಎಂ. ಕುಲಕರ್ಣಿ ಮತ್ತಿತರ ಡೀನ್‌ಗಳು ಎನ್ಐಟಿಕೆ ಕ್ಯಾಂಪಸ್‌ನಲ್ಲಿರುವ ಶ್ರೀನಿವಾಸ ಮಲ್ಯರ ಪ್ರತಿಮೆಗೆ ಮಾಲಾರ್ಪಣೆ ಮೂಲಕ ಗೌರವ ಸಲ್ಲಿಸಿದರು.

ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಮಾತನಾಡಿ, ಮಲ್ಯರು ಸ್ಥಳೀಯ, ರಾಜ್ಯ ಮತ್ತು ದೇಶಕ್ಕೆ ಶಾಶ್ವತ ಕೊಡುಗೆಗಳನ್ನು ನೀಡುವ ಮೂಲಕ ಲೋಕೋಪಕಾರಿಯಾಗಿದ್ದರು. ಶಿಕ್ಷಣ, ಆರೋಗ್ಯ, ಸಾಮಾಜಿಕ ಕಲ್ಯಾಣ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿದ್ದಾರೆ. ಖಾದಿ ಮತ್ತು ಗ್ರಾಮೋದ್ಯೋಗ, ದೇವಾಲಯಗಳಿಗೆ ದಲಿತರ ಪ್ರವೇಶ, ಅಸ್ಪೃಶ್ಯತೆ ನಿರ್ಮೂಲನೆಯಂತಹ ಗಾಂಧೀಜಿಯವರ ಉಪಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ ಎಂದರು.



ಎನ್ಐಟಿಕೆಯಲ್ಲಿ ದಿ. ಶ್ರೀನಿವಾಸ ಮಲ್ಯರ ಪ್ರತಿಮೆಗೆ ಹಾರ ಅರ್ಪಿಸಿ ಗೌರವ ಸಲ್ಲಿಸುವ ಮೂಲಕ ಶ್ರೀನಿವಾಸ ಮಲ್ಯರ ಜನ್ಮ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು. ಸಂಸ್ಥೆಯ ಮುಖ್ಯಸ್ಥರು, ಡೀನ್‌ಗಳು, ರಿಜಿಸ್ಟ್ರಾರ್, ಸಿಬ್ಬಂದಿ, ನಿವೃತ್ತ ಸಿಬ್ಬಂದಿ ಉಪಸ್ಥಿತರಿದ್ದರು.

1946ರಿಂದ 1965ರವರೆಗೆ ಸಂಸದರಾಗಿದ್ದರು. ಅವರ ದೂರದೃಷ್ಟಿಯಿಂದ ನವಮಂಗಳೂರು ಬಂದರು, ಬಜಪೆ ವಿಮಾನ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿ 66 ಮತ್ತು ಮುಖ್ಯವಾಗಿ ಎನ್ಐಟಿಕೆ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಪ್ರೊ.ರವಿ ಹೇಳಿದರು.

Vijaya karnataka, Date:22/11/23, p. no - 03